ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 13–01–2021**

# ಮಾಧ್ಯಮ ಆಮಂತ್ರಣ

**1) ಯಲಚೇನಹಳ್ಳಿ ಮೆಟ್ರೋ ನಿಲ್ದಾಣದಿಂದ ರೇಷ್ಮೆ ಸಂಸ್ಥೆ ಮೆಟ್ರೋ ನಿಲ್ದಾಣದ ವರೆಗಿನ 6 ಕಿ.ಮೀ ಮೆಟ್ರೋ ಹಸಿರು ಮಾರ್ಗದ ಉದ್ಘಾಟನಾ ಸಮಾರಂಭ :**

ಹಸಿರು ನಿಶಾನೆ ತೋರಿಸುವವರು : ಹರ್ದೀಪ್ ಸಿಂಗ್ ಪುರಿ, ವಸತಿ ಮತ್ತು ನಗರ ವ್ಯವಹಾರಗಳ ರಾಜ್ಯ ಸಚಿವರು, ಭಾರತ ಸರ್ಕಾರ (ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ : 14–1–2021 ಗುರುವಾರ, ಸಮಯ : ಸಂಜೆ 4.30 ಗಂಟೆಗೆ

ಸ್ಥಳ : ಕೋಣನಕುಂಟೆ ಕ್ರಾಸ್ ಮೆಟ್ರೋ ನಿಲ್ದಾಣ, ಬೆಂಗಳೂರು

ವಿ.ಸೂ: ಕೋವಿಡ್–19 ಹಿನ್ನಲೆಯಲ್ಲಿ ಪ್ರಸ್ತುತ ಕಾರ್ಯಕ್ರಮದ ವರದಿಗಾಗಿ ತೆರಳುವ ಮಾಧ್ಯಮ ಪ್ರತಿನಿಧಿಗಳು ಖಡ್ಡಾಯವಾಗಿ ಈಗಾಗಲೇ ವಿತರಿಸಿರುವ ಆಹ್ವಾನ ಪತ್ರಿಕೆ ಹೊಂದಿದವರಿಗೆ ಮಾತ್ರ ಪ್ರವೇಶ ಇರುತ್ತದೆ ಎಂಬ ವಿಷಯವನ್ನು ಮತ್ತೊಮ್ಮೆ ತಮ್ಮ ಅವಗಾಹನೆಗೆ ತರಲಾಗಿದೆ.

**2) ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಜಯಂತಿ :**

ಉದ್ಘಾಟನೆ : ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು

ದಿವ್ಯ ಸಾನಿಧ್ಯ : ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ
ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠ ಬಾಗಲಕೋಟೆ–ಚಿತ್ರದುರ್ಗ

ದಿನಾಂಕ : 14–1–2021 ಗುರುವಾರ, ಸಮಯ: ಸಂಜೆ 5.00 ಗಂಟೆಗೆ

ಸ್ಥಳ : ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು

# ಪತ್ರಿಕಾ ಪ್ರಕಟಣೆ

## ರಾಜ್ಯ ಸಚಿವ ಸಂಪುಟ ವಿಸ್ತರಣೆ

ಬೆಂಗಳೂರು, ಜನವರಿ 13 (ಕರ್ನಾಟಕ ವಾರ್ತೆ): ರಾಜ್ಯ ಸಚಿವ ಸಂಪುಟಕ್ಕೆ ಇಂದು ನೂತನವಾಗಿ ಸಂಪುಟ ದರ್ಜೆಯ ಏಳು ಮಂತ್ರಿಗಳು ಸೇರ್ಪಡೆಗೊಂಡರು. ರಾಜಭವನ ಗಾಜಿನ ಮನೆಯಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ವಜೂಬಾಯಿ ವಾಲಾ ಅವರು ನೂತನ ಸಚಿವರುಗಳಿಗೆ ಅಧಿಕಾರಪದ ಹಾಗೂ ಗೋಪ್ಯತೆ ಪ್ರಮಾಣವಚನ ಬೋಧಿಸಿದರು.

ವಿಧಾನ ಪರಿಷತ್ತಿನ ಸದಸ್ಯರಾದ ಎಂ.ಟಿ.ಬಿ. ನಾಗರಾಜ್, ಸಿ. ಪಿ.ಯೋಗೇಶ್ವರ್ ಹಾಗೂ ಆರ್. ಶಂಕರ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಆರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸುಳ್ಯ ವಿಧಾನಸಭಾ ಕ್ಷೇತ್ರದ ಎಸ್. ಅಂಗಾರ ಅವರು ಮೊದಲ ಬಾರಿಗೆ ಮಂತ್ರಿಯಾಗಿ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಬೆಂಗಳೂರಿನ ಮಹದೇವಪುರ ಕ್ಷೇತ್ರ ಶಾಸಕ ಅರವಿಂದ ಲಿಂಬಾವಳಿ ಅವರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಬಾಗಲಕೋಟೆ ಜಿಲ್ಲೆಯ ಬೀಳಗಿ ವಿಧಾನ ಸಭಾಕ್ಷೇತ್ರದ ಶಾಸಕ ಮುರುಗೇಶ್ ನಿರಾಣಿ ಹಾಗೂ ಹುಕ್ಕೇರಿ ವಿಧಾನ ಕ್ಷೇತ್ರದ ಶಾಸಕ ಉಮೇಶ್ ಕತ್ತಿ ಅವರು ದೇವರು ಹಾಗೂ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪ ಮುಖ್ಯಮಂತ್ರಿಗಳಾದ ಡಾ: ಅಶ್ವಥ್‌ನಾರಾಯಣ್ ಹಾಗೂ ಲಕ್ಷ್ಮಣ ಸಂಗಪ್ಪ ಸವದಿ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ವಸತಿ ಸಚಿವ ವಿ. ಸೋಮಣ್ಣ, ಕಂದಾಯ ಸಚಿವ ಆರ್. ಅಶೋಕ್ ಸೇರಿದಂತೆ ಅನೇಕ ಸಚಿವರುಗಳು ಹಾಗೂ ರಾಜ್ಯದ ಮುಖ್ಯ ಕಾರ್ಯದರ್ಶಿ ರವಿಕುಮಾರ್ ಅವರು ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

## ಸಚಿವರ ಪ್ರವಾಸ

ಬೆಂಗಳೂರು, ಜನವರಿ 13 (ಕರ್ನಾಟಕ ವಾರ್ತೆ):

ವಸತಿ ಸಚಿವ ವಿ. ಸೋಮಣ್ಣ ಅವರು ಜನವರಿ 15 ರಂದು ಮಂಗಳೂರಿಗೆ ಭೇಟಿ ನೀಡಿ ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಜನವರಿ 13 (ಕರ್ನಾಟಕ ವಾರ್ತೆ):

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಜನವರಿ 15 ರಿಂದ 16 ರವರೆಗೆ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಜನವರಿ 16 ರಂದೇ ಕೇಂದ್ರ ಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಫಲಿತಾಂಶ ಪ್ರಕಟ

ಬೆಂಗಳೂರು, ಜನವರಿ 13 (ಕರ್ನಾಟಕ ವಾರ್ತೆ):

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನವೆಂಬರ್ 2020 ರ ಮಾಹೆಯಲ್ಲಿ ನಡೆದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಫಲಿತಾಂಶವನ್ನು www.kseeb.kar.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

ಬೆಂಗಳೂರು, ಜನವರಿ 13 (ಕರ್ನಾಟಕ ವಾರ್ತೆ):

ನಿವೃತ್ತಿ ಹೊಂದಿದ ಬ್ರಿಗೇಡಿಯರ್/ಕರ್ನಲ್ ರ್‍ಯಾಂಕ್‌ಗೆ ಅಥವಾ ಸರಿಸಮಾನವಾದ ರ್‍ಯಾಂಕ್ ಹೊಂದಿರುವ ಭಾರತೀಯ ನೌಕ ಸೇನೆ/ ಭಾರತೀಯ ವಾಯು ಸೇನೆಯಿಂದ ನಿವೃತ್ತಿ ಹೊಂದಿದ ಸೇನಾಧಿಕಾರಿಯಾಗಿರುವವರಿಂದ ಕರ್ನಾಟಕ ರಾಜ್ಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶನಾಲಯದಲ್ಲಿ ನಿರ್ದೇಶಕರ ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜನವರಿ 27 ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ ಮೇಲ್ dirdswarble@gmail.com ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ ಮತ್ತು ರಸ್ತೆ ಬೆಂಗಳೂರು –25 ಇಲ್ಲಿ ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

**APPLICATIONS ARE INVITED FROM RETIRED ARMED FORCES OFFICERS FOR THE POST OF DIRECTOR**

**Scale Rs 82000-117700. Eligibility – Retired Brigadiers/Colonel or their equivalents in the Navy/Airforce can apply. Working knowledge of Kannada is must. (Read, Write & Speak). Age – Below 58 years as on 27 Jan 2021. Eligible officers can apply for the above post. Format of application can be collected from this office. Last date for accepting the**

application – 27 Jan 2021. Filled application can be submitted to Dept of Sainik Welfare & Resettlement, Field Marshal K M Cariappa Bhawan and Road, Bengaluru-560025. Email address : dirdswarblr@gmail.com

ನೂತನ ಮೆಟ್ರೋ ಫೀಡರ್ ಸಾರಿಗೆ ಸೇವೆಗಳ ಕಾರ್ಯಾಚರಣೆ ಬಗ್ಗೆ.

*****

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಮತ್ತು ಹೊರವಲಯದ ಪ್ರದೇಶಗಳ ಸಾರ್ವಜನಿಕ ಪ್ರಯಾಣಿಕರಿಗೆ, ಉತ್ತಮ, ಸುರಕ್ಷಿತ ಹಾಗೂ ಮಿತವ್ಯಯಕರ ಪ್ರಯಾಣ ದರಗಳಲ್ಲಿ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

ಮೆಟ್ರೋ ನಿಲ್ದಾಣಗಳಿಂದ, ಮೆಟ್ರೋ ರೈಲು ಪ್ರಯಾಣಿಕರು ತಮ್ಮ ಸ್ಥಳಗಳಿಗೆ ಸುಲಭವಾಗಿ ತಲುಪಲು ಅನುಕೂಲವಾಗುವ ನಿಟ್ಟಿನಲ್ಲಿ, ಸಂಸ್ಥೆಯಿಂದ ಈಗಾಗಲೇ ಮೆಟ್ರೋ ಫೀಡರ್ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಮುಂದುವರೆದು, ಬೆಂಗಳೂರು ಮೆಟ್ರೋ ರೈಲು ನಿಗಮವು ಯಲಚೇನಹಳ್ಳಿ ಮೆಟ್ರೋ ರೈಲು ನಿಲ್ದಾಣದಿಂದ ಸಿಲ್ಕ್ ಇನ್ಸ್ಟಿಟ್ಯೂಟ್(ಅಂಜನಾಪುರ) ಮೆಟ್ರೋ ರೈಲು ನಿಲ್ದಾಣದವರೆಗೆ ಸೇವೆಗಳನ್ನು ದಿನಾಂಕ 14–01–2021 ರಿಂದ ಜಾರಿಗೆ ಬರುವಂತೆ ವಿಸ್ತರಿಸುತ್ತಿದೆ.

ಪ್ರಸ್ತುತ, ಬೆಂ.ಮ.ಸಾ.ಸಂಸ್ಥೆಯಿಂದ ಕೋಣನಕುಂಟೆ ಕ್ರಾಸ್ ಕಡೆಯಿಂದ ಜಂಬೂಸವಾರಿ ದಿಣ್ಣೆ/ಅಂಜನಾಪುರ ಕಡೆಗೆ 107 ಸಾರಿಗೆಗಳಿಂದ 944 ಏಕಮುಖ ಸುತ್ತುವಳಿಗಳನ್ನು, ವಸಂತಪುರ ಕಡೆಗೆ 63 ಸಾರಿಗೆಗಳಿಂದ 451 ಸುತ್ತುವಳಿಗಳನ್ನು ಹಾಗೂ ಕನಕಪುರ ಮುಖ್ಯ ರಸ್ತೆ ಮುಖಾಂತರ ವಿವಿಧ ಪ್ರದೇಶಗಳಿಗೆ 121 ಸಾರಿಗೆಗಳಿಂದ 1134 ಏಕಮುಖ ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದೆ.

ಮುಂದುವರೆದು, ಬೆಂ.ಮ.ಸಾ.ಸಂಸ್ಥೆಯಿಂದ ನೂತನ ಮೆಟ್ರೋ ಫೀಡರ್ ಸಾರಿಗೆ ಸೇವೆಗಳ ಸೌಲಭ್ಯವನ್ನು ಕೆಳಕಂಡಂತೆ ನಾಲ್ಕು ಮಾರ್ಗಗಳಲ್ಲಿ **ದಿನಾಂಕ 15–01–2021 ರಿಂದ** ನೂತನವಾಗಿ ಪ್ರಾರಂಭಿಸಲಾಗುತ್ತಿದೆ.

| ಕ. ಸಂ | ಮಾರ್ಗ ಸಂಖ್ಯೆ | ಮೆಟ್ರೋ ನಿಲ್ದಾಣದ ಹೆಸರು | ತಲುಪುವ ಸ್ಥಳ | ಮಾರ್ಗ | ಅನುಸೂಚಿಗಳ ಸಂಖ್ಯೆ | ಸುತ್ತುವಳಿಗಳ ಸಂಖ್ಯೆ |
|---|---|---|---|---|---|---|
| 1 | ಎಂಎಫ್–34 | ತಲಘಟ್ಟಪುರ | ಕೆಂಗೇರಿ ಟಿಟಿಎಂಸಿ | ಚಿಕ್ಕೇಗೌಡನಪಾಳ್ಯ, ಕೋಡಿಪಾಳ್ಯ | 04 | 54 |
| 2 | ಎಂಎಫ್–35 | ದೊಡ್ಡಕಲ್ಲಸಂದ್ರ | ರಾಜರಾಜೇಶ್ವರಿ ನಗರ ಗೇಟ್ | ಕರಿಯಣ್ಣನಪಾಳ್ಯ, ಗಾಣಕಲ್, ಹಲಗೆವಡೇರಹಳ್ಳಿ | 04 | 56 |
| 3 | ಎಂಎಫ್–36 | ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) | ಕುಂಬಳಗೋಡು | ತಾತಗುಣಿ, ಅಗರ, ದೇವಗೆರೆ | 04 | 58 |

| | | | | | | |
|---|---|---|---|---|---|---|
| 4 | ಎಂಎಫ್–37 | ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) | ಹಾರೋಹಳ್ಳಿ | ಕಗ್ಗಲಿಪುರ, ರಾವುಗೋಡ್ಲು, ಗಬ್ಬಾಡಿ | 04 | 36 |
| | | ಒಟ್ಟು | | | **16** | **204** |

**ನೂತನ ಮೆಟ್ರೋ ಫೀಡರ್ ಸಾರಿಗೆ ಸೇವೆಗಳ ಕಾರ್ಯಾಚರಣೆಯ ವೇಳಾಪಟ್ಟಿ ಕೆಳಕಂಡಂತಿವೆ.**

| **1. ಮಾರ್ಗಸಂಖ್ಯೆ: ಎಂಎಫ್–34 ತಲಘಟ್ಟಪುರ ಮೆಟ್ರೋ ನಿಲ್ದಾಣ – ಕೆಂಗೇರಿ ಟಿಟಿಎಂಸಿ** | |
|---|---|
| ತಲಘಟ್ಟಪುರ ಮೆಟ್ರೋ ನಿಲ್ದಾಣ ಬಿಡುವ ವೇಳೆ: | ಕೆಂಗೇರಿ ಟಿಟಿಎಂಸಿ ಬಿಡುವ ವೇಳೆ : |
| 06:45, 07:20, 08:00, 08:25, 08:45, 09:05, 09:25, 09:45, 10:05, 10:25, 11:10, 11:50, 13:00, 14:20,15:05, 15:45, 16:05, 16:50, 17:10, 17:30, 17:55, 18:20, 19:00, 19:50, 20:30, 22:00. | 06:40, 07:20, 08:05, 08:25, 08:45, 09:05, 09:25, 09:45, 10:05, 10:25, 11:10, 11:50, 12:25, 13:00, 14:20, 15:05, 15:45, 16:05, 16:25, 17:10, 17:35, 17:55, 18:15, 18:40, 19:05, 19:45, 20:35, 21:15. |
| **2. ಮಾರ್ಗಸಂಖ್ಯೆ: ಎಂಎಫ್–35 ದೊಡ್ಡಕಲ್ಲಸಂದ್ರ ಮೆಟ್ರೋ ನಿಲ್ದಾಣ – ರಾಜರಾಜೇಶ್ವರಿ ನಗರ ಗೇಟ್** | |
| ದೊಡ್ಡಕಲ್ಲಸಂದ್ರ ಮೆಟ್ರೋ ನಿಲ್ದಾಣ ಬಿಡುವ ವೇಳೆ: | ರಾಜರಾಜೇಶ್ವರಿ ನಗರ ಗೇಟ್ ಬಿಡುವ ವೇಳೆ : |
| 06:45, 07:20, 08:00, 08:25, 08:45, 09:05, 09:25, 09:45, 10:05, 10:25, 11:10, 11:50, 12:30, 13:00, 14:20, 15:05, 15:45, 16:05, 16:50, 17:10, 17:30, 17:55, 18:20, 18:40, 19:00, 19:50, 20:30, 22:00. | 06:40, 07:20, 08:05, 08:25, 08:45, 09:05, 09:25, 09:45, 10:05, 10:25, 11:10, 11:50, 12:25, 13:00, 14:20, 15:05, 15:45, 16:05, 16:25, 17:10, 17:35, 17:55, 18:15, 18:40, 19:05, 19:45, 20:35, 21:15. |
| **3. ಮಾರ್ಗಸಂಖ್ಯೆ : ಎಂಎಫ್–36 ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) ಮೆಟ್ರೋ ನಿಲ್ದಾಣ – ಕುಂಬಳಗೋಡು** | |
| ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) ಮೆಟ್ರೋ ನಿಲ್ದಾಣ ಬಿಡುವ ವೇಳೆ: | ಕುಂಬಳಗೋಡು ಬಿಡುವ ವೇಳೆ: |
| 07:00, 07:20, 07:40, 08:00, 08:20, 08:40, 09:00, 09:20, 09:40, 10:00, 10:20, 11:05, 11:30, 11:50, 12:10, 14:05, 16:35, 16:55, 17:15, 17:45, 18:05, 18:25, 18:45, 20:00, 20:20, 20:40, 21:40, 22:00, 22:20. | 06:20, 06:40, 07:10, 07:40, 08:00, 08:20, 08:40, 09:00, 09:20, 09:40, 10:00, 10:45, 11:05, 11:25, 12:30, 15:50, 16:10, 16:30, 16:40, 17:20, 17:40, 18:00, 18:30, 18:50, 19:10, 19:30, 20:45, 21:05, 21:25. |
| **4. ಮಾರ್ಗಸಂಖ್ಯೆ : ಎಂಎಫ್–37 ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) ಮೆಟ್ರೋ ನಿಲ್ದಾಣ – ಹಾರೋಹಳ್ಳಿ**<br>**5.** | |
| ಸಿಲ್ಕ್ ಇನ್ಸ್ಟಿಟ್ಯೂಟ್ (ಅಂಜನಾಪುರ) ಮೆಟ್ರೋ ನಿಲ್ದಾಣ | ಹಾರೋಹಳ್ಳಿ ಬಿಡುವ ವೇಳೆ: |

| ಬಿಡುವ ವೇಳೆ: 08:00, 08:20, 08:40, 09:20, 10:00, 10:20, 10:40, 12:15, 17:00, 17:20, 17:40, 18:00, 19:00, 19:20, 19:40, 21:40, 22:00, 22:20. | 07:00, 07:20, 07:40, 09:00, 09:20, 09:40, 10:20, 11:25, 11:45, 12:05, 15:10, 18:00, 18:20, 18:40, 19:00, 20:20, 20:40, 21:00. |
|---|---|

ಮುಂದಿನ ದಿನಗಳಲ್ಲಿ, ಪ್ರಯಾಣಿಕರ ದಟ್ಟಣೆ/ಬೇಡಿಕೆಗನುಗುಣವಾಗಿ ಮೆಟ್ರೋ ಫೀಡರ್ ಸಾರಿಗೆ ಸೇವೆಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

## ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
## ಪರಿಸರ ಭವನ, ಬೆಂಗಳೂರು.
### ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 13.1.2021**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 86 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 92 | ತೃಪ್ತಿಕರ | $PM_{10}$ |
| 3 | ಕವಿಕ, ಮೈಸೂರುರಸ್ತೆ | 106 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 60 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 70 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 98 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 34 | ಉತ್ತಮ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 22 | ಉತ್ತಮ | $NO_2$ |
| 9 | ಪೀಣ್ಯ | * | * | * |
| 10 | ಬಿಟಿಎಂ ಲೇಔಟ್ | 39 | ಉತ್ತಮ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

**Karnataka State Pollution Control Board**
**ParisaraBhavan, Bengaluru**
**AQI of the CAAQM stations established in Bengaluru City**
**Date :13.1.2021**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 86 | Satisfactory | $PM_{10}$ |
| 2 | Jayanagar 5th Block, Shalini ground | 92 | Satisfactory | $PM_{10}$ |
| 3 | KAVIKA, Mysore Road | 106 | Moderate | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 60 | Satisfactory | $PM_{10}$ |
| 5 | HSR Layout, near Central Silkboard | 70 | Satisfactory | $PM_{10}$ |

| | | | | |
|---|---|---|---|---|
| 6 | City Railway Station, Magestic, Bengaluru | 98 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 34 | Good | $PM_{10}$ |
| 8 | BWSSB, Kadabesanahalli | 22 | Good | $NO_2$ |
| 9 | Peenya | * | * | * |
| 10 | BTM Layout | 39 | Good | CO |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |